**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 09.04.2026**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಮ್ಮ ಅತ್ತೆ ಮತ್ತು ನನ್ನ ಗಂಡ ಸೇರಿ ನನಗೆ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ. 1 ಮತ್ತು 2 ನೇ ಪ್ರತಿವಾದಿಗಳು ಅವರುಗಳ ಭಾಗಾಂಶವನ್ನು ಬರೆದುಕೊಟ್ಟಿರುವ ಬಗ್ಗೆ ಕ್ರಯಪತ್ರದಲ್ಲಿ ಉಲ್ಲೇಖ ಇದೆಯಾ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಭಾಗಾಂಶವನ್ನು ನನಗೆ ಬರೆದುಕೊಟ್ಟಿದ್ದಾರೆಂದು ಹೇಳುತ್ತಾರೆ. 1 ನೇ ವಾದಿ ಮದುವೆಯಾಗಿ ಸುಮಾರು 25 ವರ್ಷವಾಗಿದೆ. 2 ನೇ ವಾದಿಯ ವದುವೆಯಾಗಿ ಸುಮಾರು 20 ವರ್ಷವಾಗಿದೆ. ವಾದಿಗಗಳ ಮದುವೆ ಸಾಲಕ್ಕಾಗಿ ಎಷ್ಟು ಸಾಲ ಮಾಡಿದ್ದರೆಂದು 1 ನೇ ಪ್ರತಿವಾದಿ ಕ್ರಯ ಪತ್ರದಲ್ಲಿ ಬರೆದಿಲ್ಲ. 2 ನೇ ಪ್ರತಿವಾದಿ ಮದುವೆಯಾಗಿ ಸುಮಾರು 18 ವರ್ಷವಾಗಿದೆ. ಯಾರ್ಯಾರ ಬಳಿ ಸಾಲ ಇತ್ತು ಎಂದು ಕ್ರಯಪತ್ರದಲ್ಲಿ ತೋರಿಸಿಲ್ಲ. ಕ್ರಯಪತ್ರವಾಗುವ ಪೂರ್ವದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಕರಾರು ಪತ್ರವಾಗಿರಲಿಲ್ಲ. ನೀವು, ನಿಮ್ಮ ಅತ್ತೆ, ನಿಮ್ಮ ಗಂಡ ಸೇರಿಕೊಂಡು ವಾದಿಗಳ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂದು ಕ್ರಯಪತ್ರ ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ದಾವಾಸ್ತಿಯ ಸರ್ವೆ ನಂಃ 65. ದಾವಾಸ್ತಿ ಐಟಂ 1 ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ 1 ಒಟ್ಟು ಕುಟುಂಬದ ಆಸ್ತಿಯಾಗಿದ್ದರು ಕ್ರಯಪತ್ರವನ್ನು ನ್ನು ನೀವು ಸೃಷ್ಟಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಕ್ರಯಪತ್ರವಾದ ನಂತರ ಮೂರು ವರ್ಷದ ವರೆಗೂ ನಿಮ್ಮ ಹೆಸರಿಗೆ ಖಾತೆಯಾಗಿರಲಿಲ್ಲ

*ಎಂದರೆ ಸರಿ. ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವ ದಾಖಲೆಯನ್ನು ನೀವು ಸೃಷ್ಟಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***